

# ಟೊಯೋಟ ಮ್ಯೂಸಿಯಂ

## ಆಟೊಮೊಬೈಲ್ ವಿಶ್ವಕೋಶ



ವಾಹನ ಜಗತ್ತಿನ ವಿಸ್ಮಯಕರ ಹೆಜ್ಜೆಗುರುತುಗಳು ಜಪಾನ್‌ನ 'ಟೊಯೋಟ ಆಟೊಮೊಬೈಲ್ ಮ್ಯೂಸಿಯಂ'ನಲ್ಲಿ ಅನಾವರಣಗೊಂಡಿವೆ. ಮೂರು ಅಂತಸ್ತುಗಳ ಕಟ್ಟಡದಲ್ಲಿರುವ ಈ ಸಂಗ್ರಹಾಲಯ–ಮನುಕುಲದ ಮತ್ತು ಮೋಟಾರು ವಾಹನಗಳ ಸಮೃದ್ಧ ಭವಿಷ್ಯವನ್ನು ಬಿಂಬಿಸುವ ಆಶಯವನ್ನು ಒಳಗೊಂಡಿದೆ.

■ **ಮಂಜುನಾಥ ಡಿ.ಎಸ್.**

ಜಪಾನ್ ಭೇಟಿಯ ನನ್ನ ಕಾರ್ಯಸೂಚಿಯಲ್ಲಿ ಎದ್ದು ಕಾಣುವಂತಿದ್ದುದು, ನಗೋಯ ಬಳಿಯ ನಾಗಕುಟೆ ನಗರದಲ್ಲಿರುವ 'ಟೊಯೋಟ ಆಟೊಮೊಬೈಲ್ ಮ್ಯೂಸಿಯಂ' ವೀಕ್ಷಣೆ. ಎರಡು ದಶಕಗಳಿಗೂ ಹೆಚ್ಚು ಕಾಲ ಮೋಟಾರುವಾಹನ ಕ್ಷೇತ್ರದೊಡನೆ ನಿಕಟ ಸಂಪರ್ಕ ಹೊಂದಿದ್ದ ನನಗೆ, ವಿಶ್ವದ ಅಗ್ರಮಾನ್ಯ ಆಟೊಮೊಬೈಲ್ ಕಂಪನಿಯ ಮ್ಯೂಸಿಯಂ ವೀಕ್ಷಿಸಲು ದೊರೆತ ಅವಕಾಶ ವಿಶೇಷವೆನಿಸಿದ್ದು ಸಹಜವೇ ಆಗಿತ್ತು.

ಆಟೊಮೊಬೈಲ್ ಜಗತ್ತಿನ ಚರಿತ್ರೆಯನ್ನು ಸ್ಮರಿಸುವ ಉದ್ದೇಶದಿಂದ ರೂಪುಗೊಂಡಿರುವ ಆ ಸಂಗ್ರಹಾಲಯ, ವಾಹನ ಜಗತ್ತಿನ ಬಗ್ಗೆ ಕುತೂಹಲವುಳ್ಳವರ ಪಾಲಿಗೆ ನೋಡಿದಷ್ಟೂ ಮುಗಿಯದ ಆಕರ್ಷಣ ತಾಣ. ಟೊಯೋಟ ಮೋಟರ್ ಕಾರ್ಪೊರೇಷನ್‌ನ ಸುವರ್ಣ ಮಹೋತ್ಸವದ ಅಂಗವಾಗಿ 1989ರಲ್ಲಿ ಆರಂಭಗೊಂಡ ಆ ಮ್ಯೂಸಿಯಂ, ಮನುಕುಲದ ಮತ್ತು ಮೋಟಾರುವಾಹನಗಳ ಸಮೃದ್ಧ ಭವಿಷ್ಯವನ್ನು ರೂಪಿಸಲು ಸಮರ್ಪಣೆಗೊಂಡಿದೆ.

ಮೂರು ಮಹಡಿಗಳ ಭವ್ಯ ಕಟ್ಟಡವದು. ಕಟ್ಟಡದ 11 ಸಾವಿರ ಚದರ ಮೀಟರ್ ವಿಸ್ತೀರ್ಣದ ಜಾಗದಲ್ಲಿರುವ ಆಟೊಮೊಬೈಲ್ ಗ್ಯಾಲರಿಯಲ್ಲಿ ವಿಶ್ವದ ಹಲವೆಡೆಗಳಲ್ಲಿ ತಯಾರಾದ ನೂರ ನಲವತ್ತಕ್ಕೂ ಹೆಚ್ಚು ವಾಹನಗಳನ್ನು ಪ್ರದರ್ಶಿಸಲಾಗಿದೆ. ವಾಹನೋದ್ಯಮದ ಬೆಳವಣಿಗೆಯ ಪ್ರಮುಖ ಘಟ್ಟಗಳನ್ನಾಧರಿಸಿ, ದರ್ಶಿಕೆಗಳನ್ನು ಹದಿಮೂರು ವಿಭಾಗಗಳಾಗಿ ವಿಂಗಡಿಸಲಾಗಿದೆ.

'ಟೊಯೋಡ' (ಟೊಯೋಟದ ಮೊದಲ ಹೆಸರು) ಪ್ರಪ್ರಥಮವಾಗಿ ತಯಾರಿಸಿದ ಮೋಟಾರ್‌ಕಾರ್‌ನ ಹೆಸರು 'ಮಾಡೆಲ್–ಎಎ'. ಮೊದಲ ಅಂತಸ್ತಿನಲ್ಲಿರುವ ಈ ಕಾರಿನ ಪ್ರತಿಕೃತಿ ವೀಕ್ಷಕರನ್ನು ಸ್ವಾಗತಿಸುತ್ತದೆ. ಎರಡನೆಯ ಮಹಡಿಯಲ್ಲಿ ಎಂಟು ವಿಭಾಗಗಳಿವೆ. ಸಹಜವಾಗಿಯೇ, ಪ್ರಥಮ ವಿಭಾಗ ಆಟೊಮೊಬೈಲ್‌ನ ಉಗಮಕ್ಕೆ ಮೀಸಲಾಗಿದೆ. ಇಪ್ಪತ್ತನೆಯ ಶತಮಾನದ ಆರಂಭದಲ್ಲಿಯೇ ಹಬೆ, ವಿದ್ಯುತ್, ಮತ್ತು ಗ್ಯಾಸೊಲಿನ್ ಚಾಲಿತ ವಾಹನಗಳು ಜಪಾನಿನ ರಸ್ತೆಗಳ ಶೋಭೆ ಹೆಚ್ಚಿಸಿದ್ದವು. ಇದೇ ವೇಳೆ ಆಮದು ಮಾಡಿಕೊಂಡ ವಾಹನಗಳನ್ನು ಅನುಕರಿಸಿ ಜಪಾನಿನಲ್ಲಿ ಪ್ರಥಮ ಮೋಟಾರು ವಾಹನವನ್ನು ತಯಾರಿಸಲಾಯಿತು. ಆದರೆ, ಕೈಗಾರಿಕೆಗೆ ಅಗತ್ಯವಾದ ಸಂಪನ್ಮೂಲಗಳು ಹಾಗು ಮೂಲಸೌಕರ್ಯಗಳ ಕೊರತೆಯಿಂದಾಗಿ ಅಧಿಕ ಸಂಖ್ಯೆಯಲ್ಲಿ ಮೋಟಾರುವಾಹನಗಳನ್ನು ಉತ್ಪಾದಿಸುವಲ್ಲಿ ಜಪಾನ್ ಯಶಸ್ಸು ಕಾಣಲಿಲ್ಲ.

ಯೂರೋಪ್ ಮತ್ತು ಅಮೆರಿಕದ ತಂತ್ರಜ್ಞರ ಸಂಶೋಧನೆ ಮತ್ತು ಆವಿಷ್ಕಾರಗಳ ಪರಿಣಾಮವಾಗಿ ಆಟೊಮೊಬೈಲ್ ಕ್ಷೇತ್ರದಲ್ಲಿ ಉಂಟಾದ ಕ್ಷಿಪ್ರ ಪ್ರಗತಿಯನ್ನು ಎರಡನೆಯ ವಿಭಾಗ ಪರಿಚಯಿಸುತ್ತದೆ. ಜನಸಾಮಾನ್ಯರ ಬಳಕೆಗೆಂದು 1908ರಲ್ಲಿ ಹೆನ್ರಿ ಫೋರ್ಡ್ ಉತ್ಪಾದಿಸಿದ 'ಮಾಡೆಲ್–ಟಿ' ಕಾರು ಮೋಟಾರುವಾಹನಗಳ

